ನಾನ್ಯಾರ್ಗೆ ಮಾಡ್ಬೇಕು ಹೇಳ್ರಿ ಫೋನು.'' ಎಂದು ಖಾರವಾಗಿ ಆನ್ಸರ್ ಮಾಡುತ್ತಿದ್ದ. ಊರಿನ ಹಿರಿಯರನೇಕರು, ''ನೋಡ್ರಿ ಸಾಬಸ್ತ ಅಂದ್ರೆ ಆ ರಂಗಶ್ಯಾಮಣ್ಣನ ಮಗ ತಂಗ್ಯ. ಒಂದು ತಂಗುಳು ಮುದ್ದೆ, ಒಂದು ಸೌಟು ಮೊಸರಿದ್ರೆ ಸಾಕು ಮಧ್ಯಾನುದ್ಗಂಟ ಮೈ ಮುರಿಯಂಗೆ ಕೆಲ್ಸ ಮಾಡ್ತಾನೆ. ಫಳಿಗ್ಗೊಂದಪ ಆ ಮೊಬೈಲ್ ತಿಕ್ಕೆ ಬೆರಳಿಡೋರು ಏನ್ ಕಾಪ್ರ ಮಾಡಾರು. ಮನೇಲಿ ಟೀವಿ ಇದ್ರೂ ಒಂದಪನೂ ಅದ್ರ ಸ್ವಿಚ್ ಮುಟ್ಟೋನಲ್ವಂತೆ. ಅಲಾ ಅಲಾ ಈ ಕಾಲ್ದಾಗೂ ಇಂಥ ಹುಡುಗುರವ್ರಲ್ಲಾ. ಅದುಕ್ಕೆ ಗೇಯೋದ್ರಲ್ಲಾಗ್ಲಿ, ಬಿತ್ತೋದ್ರಲ್ಲಾಗ್ಲಿ, ಕಣ ಮಾಡೋದ್ರಲ್ಲಾಗ್ಲಿ ಇಡೀ ಊರಿಗೆ ಎಲ್ಡ್ ವಾರ ಮುಂದಿರ್ತಾನೆ. ಆಲೆಮನೆ ಟೈಮಿನಲ್ಲಿ ಹಗಲು ಇರುಳು ನಿದ್ಗೆಟ್ಟು ಸಂಭಾಳಿಸ್ತಾನೆ. ಅಷ್ಟಾದ್ರೂ ಒಂದು ಸಿಗರೇಟು ಸೇದಲ್ಲ, ಒಂದು ಬೀರ್ ಕುಡ್ಯಲ್ಲ. ಅವುನ್ ಕೈ ಹಿಡ್ಯೋಳು ಪುಣ್ಯ ಮಾಡಿರ್ತಾಳೆ.'' ಎಂದು ಯದ್ರಾಬಿರ್ರಿ ಕೊಂಡಾಡುತ್ತಿದ್ದರು. ಅದರ ಬಗ್ಗೆ ರಂಗಶ್ಯಾಮಣ್ಣ ಮತ್ತು ಮುದ್ದನುಮಕ್ಕ ಇಬ್ಬರಿಗೂ ಹೆಮ್ಮೆಯಿತ್ತು. ಹೊಂಗೆ ಕಾಯಿ, ಹುಣ್ಸೆ ಬೀಜ, ಬೇವಿನ ಬೀಜ ಮುಂತಾದುವುಗಳನ್ನು ಕೂಡಿಟ್ಟು ಮಾರಿ ಬಂದ ಹಣವನ್ನು ಒಂದು ಹುಂಡಿಯಲ್ಲಿ ಹಾಕಿಟ್ಟಿದ್ದ. ಐದಾರು ವರ್ಷಗಳಿಂದ ಅಂದಾಜು ಹುಂಡಿಯಲ್ಲಿ ಹನ್ನೆರಡದಿನ್ನೈದು ಸಾವಿರ ಸಂಗ್ರಹವಾಗಿರಬೇಕು!

ಅದಂಗಿರಲಿ, ಹೆಣ್ಣಿನ ಮನೆಯಿಂದ ಬಂದ ದಿನ ರಾತ್ರಿ ಪೂರ್ತಿ ತಂಗ್ಯನಿಗೇಕೊ ನಿದ್ದೆ ಹತ್ತಲಿಲ್ಲ. ಮಧ್ಯೆ ಮಧ್ಯೆ ಅರ್ಥವಾಗದ ಎಂತೆಂಥವೋ ಕನಸುಗಳು ಬಿದ್ದು ತಾನು ಮದುವೆಯಾಗಲು ನಿಶ್ಚಯವಾಗಿರುವ ಹೆಣ್ಣು ನಿರ್ಮಲ ಎದುರಿಗೆ ನಿಂತು, ''ಊರಿಗೆ ಹೋದ ಮೇಲೆ, ಮೊಬೈಲ್ ತಗಂಡ್ಮೇಲೆ ಫೋನ್ ಮಾಡ್ರಿ.'' ಎಂದು ಪದೇ ಪದೇ ಹೇಳುತ್ತಿರುವಂತೆ ಅನ್ನಿಸತೊಡಗಿ, ಅಂಥ ಅಪರಾತ್ರಿಯಲ್ಲೂ ಎದ್ದು ಲೈಟ್ ಹಾಕಿ ಬಂದ ಕೂಡಲೇ ಪ್ಯಾಕೆಟ್ ಕ್ಯಾಲೆಂಡರ್‌ನಲ್ಲಿ ಬರೆದಿಟ್ಟುಕೊಂಡಿದ್ದ ಅವಳ ಮೊಬೈಲ್ ನಂಬರುಗಳಿಗೆ ಮುತ್ತು ಕೊಟ್ಟು ಮೈ ಕೂದಲನ್ನು ನಿಮಿರಿಸಿಕೊಳ್ಳುತ್ತಿದ್ದ. ಹುಡುಗಿಯ ಮಾತುಗಳು ಪದೇ ಪದೇ ಪ್ರತಿಧ್ವನಿಸಿದಂತಾಗಿ, ಆ ಪ್ರತಿಧ್ವನಿಯು ತಂಗ್ಯನನ್ನು ಅಲುಗಾಡಿಸಿ ತಾನೂ ಒಂದು ಮೊಬೈಲ್ ತೆಗೆದುಕೊಳ್ಳಬೇಕೆಂಬ ದೃಢ ನಿರ್ಧಾರಕ್ಕೆ ಆಗಿಂದಾಗಲೇ ಬಂದು ಬಿಟ್ಟಿದ್ದ. ಬೆಳಗ್ಗೆಯೇ ಎದ್ದು ತಂಗಳುಂಡು ತಾನೊಂದು ಮೊಬೈಲ್ ತೆಗೆದುಕೊಳ್ಳಬೇಕೆಂಬ ನಿರ್ಧಾರವನ್ನು ಅಮ್ಮ ಮುದ್ದನುಮಕ್ಕನ ಮುಂದೆ ಹೇಳಿದಾಗ, ಮುದ್ದನುಮಕ್ಕ, ''ಅಯ್ಯೊ ತಗಳ್ಳೋದು ತಗತಿಯ ಒಂದೊಳ್ಳೆದೆ ತಗೊ.'' ಎಂದು ಖುಷಿಯಿಂದಲೇ ಸಪೋರ್ಟ್ ಮಾಡಿದ್ದಳು. ತಂಗ್ಯನು ಗೂಡಿನಲ್ಲಿದ್ದ ಹುಂಡಿಯನ್ನು ಒಡೆದು ಎಣಿಸಿದಾಗ ಹನ್ನೆರಡು ಸಾವಿರದ ಆರುನೂರ ಎಂಬತ್ತು ರೂಪಾಯಿ ಇತ್ತು. ಐದು ಸಾವಿರ ಜೇಬಿಗಿಟ್ಟುಕೊಂಡು ಮಿಕ್ಕಿದ್ದನ್ನು ಮುದ್ದನುಮಕ್ಕನ ಕೈಗಿಟ್ಟು ತಂಗ್ಯ ಮಧುಗಿರಿಗೆ ಪ್ರಯಾಣ ಬೆಳೆಸಿದ್ದ. ಯಂಗೂ ಮೊನ್ನೆ ರಾತ್ರಿ ಶಂಕರ್ ಟಾಕೀಸಿನಲ್ಲಿ ಸುವೇಗಾವನ್ನು ಬಿಟ್ಟು ಬಂದಿದ್ದನಲ್ಲ. ಮೊಬೈಲ್ ನಂಬರ್ ತಗೋಬೇಕಾದ್ರೆ ಆಧಾರ್ ಕಾರ್ಡ್ ಜೆರಾಕ್ಸ್ ಕೊಡಬೇಕೆಂದು ತಂಗ್ಯನಿಗೆ ಗೊತ್ತಿತ್ತು. ಹಾಗಾಗಿ ಆಧಾರ್ ಕಾರ್ಡನ್ನು ತೆಗೆದುಕೊಂಡು ಹೋಗಿದ್ದ. ಶಂಕರ್ ಟಾಕೀಸಿಗೆ ಹೋದಾಗ ಮ್ಯಾನೇಜರ್ ಸುವೇಗಾದ ಕೀಯನ್ನು ಕೊಟ್ಟಿದ್ದ. ಎರಡು ಚಕ್ರಗಳಿಗೂ ಪಂಚರ್ ಹಾಕಲಾಗಿತ್ತು. ಸುವೇಗಾದಲ್ಲಿ ಹೋಗಿ ಮೊಬೈಲ್ ಅಂಗಡಿಯ ಹತ್ತಿರ ನಿಲ್ಲಿಸಿ ಒಳ ನುಗ್ಗಿದ ತಂಗ್ಯನು, ''ಎಲ್ಲಿ ಶೆಟ್ರೆ ಸುಮಾರಾಗಿರೋದು ಒಂದು ಮೊಬೈಲ್ ಫೋನ್ ಕೊಡ್ರಿ.'' ಎಂದಿದ್ದ. ಶೆಟ್ಟಿ ಐದಾರು ಫೋನುಗಳನ್ನು ತೆಗೆದು ತೋರಿಸಿದ್ದ. ಒಂದೂವರೆ ಸಾವಿರ ರೂಪಾಯಿ ಕೊಟ್ಟು ಒಂದನ್ನು ಸೆಲೆಕ್ಟ್ ಮಾಡಿದ್ದ. ''ನೀವು ಊರಿಗೆ ಹೋಗುವಷ್ಟರಲ್ಲಿ ಸಿಮ್ ಆಕ್ಟೀವ್ ಆಗಿರ್ತದೆ ಹೋಗಿ ಸಾ.'' ಎಂದು ಸಿಮ್ ನಂಬರನ್ನು ಒಂದು ಕಾಗದದ ಚೂರಿನ ಮೇಲೆ ಬರೆದುಕೊಟ್ಟಿದ್ದಲ್ಲದೆ ಫೋನ್ ಹೆಂಗೆ ಮಾಡಬೇಕು, ಫೋನ್ ಬಂದರೆ ಹೆಂಗೆ ರಿಸೀವ್ ಮಾಡಬೇಕು ಎಂಬುದನ್ನು ಹತ್ತು ನಿಮಿಷ ಶೆಟ್ಟಿ ಚೆನ್ನಾಗಿ ಹೇಳಿಕೊಟ್ಟಿದ್ದ.